# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 461 (426)
2. ಸದಸ್ಯರ ಹೆಸರು : ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 15-09-2022
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮೆಟ್ರೋ ರೈಲು ನಿಗಮ(BMRCL) ದಲ್ಲಿ ಹಾಲಿ ಗುತ್ತಿಗೆಯಡಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು; (ಹುದ್ದೆ, ಮಾಸಿಕ ಪಡೆಯುತ್ತಿರುವ ವೇತನದ ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿ.ಎಂ.ಆರ್.ಸಿ.ಎಲ್)ದಲ್ಲಿ 1157 ಉದ್ಯೋಗಿಗಳು ಗುತ್ತಿಗೆ ಆದಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ.<br><br>ಈ ನೌಕರರ ಹುದ್ದೆ, ಪಡೆಯುತ್ತಿರುವ ವೇತನ ಮುಂತಾದ ವಿವರಗಳನ್ನು **ಅನುಬಂಧದಲ್ಲಿ** ಲಗತ್ತಿಸಿದೆ. |
| ಆ) | ಸದರಿ ನೌಕರರಲ್ಲಿ ಕರ್ನಾಟಕ ರಾಜ್ಯದವರ ಸಂಖ್ಯೆ ಎಷ್ಟು; ಬೇರೆ ರಾಜ್ಯದವರ ಸಂಖ್ಯೆ ಎಷ್ಟು; | ಸದರಿ 1157 ಉದ್ಯೋಗಿಗಳಲ್ಲಿ 1051 ಉದ್ಯೋಗಿಗಳು ಕರ್ನಾಟಕದವರಾಗಿದ್ದು ಉಳಿದ 106 ಉದ್ಯೋಗಿಗಳು ಹೊರ ರಾಜ್ಯದವರಾಗಿರುತ್ತಾರೆ. |
| ಇ) | ಮೆಟ್ರೋ ನಿಗಮಕ್ಕೆ ಸಾವಿರಾರು ಗುತ್ತಿಗೆ ನೌಕರರನ್ನು ಯಾವ ಮಾನದಂಡದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ: | ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ನಿರ್ದೇಶಕ ಮಂಡಳಿಯ ಅನುಮೋದನೆಯ ಮೇರೆಗೆ ಕೆಳಗಿನಂತೆ ನೇಮಕಾತಿ ಪ್ರಕ್ರಿಯೆ ನಡೆಸಲಾಗುತ್ತಿದೆ.<br><br>ನಿಗಮದಲ್ಲಿ ಗುತ್ತಿಗೆಯಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲು ಪ್ರತ್ಯೇಕ ವೃಂದದ ಹುದ್ದೆಗಳಿಗೆ ಪ್ರತ್ಯೇಕ ಮಾನದಂಡಗಳನ್ನು (ಅಂದರೆ ಅಭ್ಯರ್ಥಿಗಳ ವಯಸ್ಸು, ಹೊಂದಿರಬೇಕಾದ ವಿದ್ಯಾರ್ಹತೆ, ನಿರ್ದಿಷ್ಟ ಪಡಿಸಿದ ವಿಭಾಗದಲ್ಲಿ ಪಡೆದಿರುವ ಕಾರ್ಯಾನುಭವ, ಹಿಂದಿನ ಇಲಾಖೆ / ಸಂಸ್ಥೆಗಳಲ್ಲಿ ಸಲ್ಲಿಸಿರುವ ತೃಪ್ತಿದಾಯಕ ಸೇವೆ) ನಿಗದಿಪಡಿಸಲಾಗಿದೆ. ಹಂತ-2ರ ಯೋಜನಾ ಅನುಷ್ಠಾನಕ್ಕೆ ಅವಶ್ಯವಿರುವ ತಾಂತ್ರಿಕ ಸಿಬ್ಬಂದಿಯನ್ನು ಇದೇ ರೀತಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವವರನ್ನು ಉದ್ಯೋಗ ಪ್ರಕಟಣೆಗಳ ಮೂಲಕ (ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳು ಹಾಗೂ ಬೆಂಗಳೂರು ಮೆಟ್ರೋ ರೈಲು ನಿಗಮದ ವೆಬ್‌ಸೈಟ್) ನಿಗದಿತ ಅವಧಿಯ ಗುತ್ತಿಗೆ ಉದ್ಯೋಗಕ್ಕಾಗಿ ಪ್ರಕಟಿಸಿ ಆಯ್ಕೆ ಮಾಡಲಾಗುತ್ತಿದೆ.<br><br>ಆದಾಗ್ಯೂ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಿ ಅನುಭವ ಹೊಂದಿ ನಿವೃತ್ತಿಗೊಂಡಿರುವ/ ಮೆಟ್ರೋ ತಾಂತ್ರಿಕತೆಯಲ್ಲಿ ಪರಿಣಿತಿ ಮತ್ತು ಅನುಭವ ಹೊಂದಿದ ಉದ್ಯೋಗಿಗಳ ಸೇವೆಯನ್ನು ಉದ್ಯೋಗ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸುವ ಪ್ರಕ್ರಿಯೆ ಇಲ್ಲದೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಅವಧಿಗೆ ನೇಮಕಾತಿ ಮಾಡಲಾಗುತ್ತಿದೆ. |

....2

| | | |
|---|---|---|
| ಈ) | ಜನಪ್ರತಿನಿಧಿಗಳು ಶಿಫಾರಸ್ಸು ಮಾಡಿದ ಯಾವ ಅಭ್ಯರ್ಥಿ ಗಳಿಗೂ ಕೆಲಸ ನೀಡದೆ ಅಧಿಕಾರಿಗಳು ತಮ್ಮ ಮನಬಂದಂತೆ ಗುತ್ತಿಗೆ ನೌಕರರನ್ನು ನೇಮಕಾತಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಸಂಸ್ಥೆಯು ಉದ್ಯೋಗ ಪ್ರಕಟಣೆಗಳ ಮೂಲಕ (ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳು ಹಾಗೂ ಬೆಂಗಳೂರು ಮೆಟ್ರೋ ರೈಲು ನಿಗಮದ ವೆಬ್‌ಸೈಟ್) ಉದ್ಯೋಗ ಅಧಿಸೂಚನೆಯನ್ನು ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್‌ನಲ್ಲಿ ಅರ್ಜಿಗಳನ್ನು ನಿಗದಿತ ಅವಧಿಯ ಗುತ್ತಿಗೆ ಉದ್ಯೋಗಕ್ಕಾಗಿ ಆಹ್ವಾನಿಸಲಾಗುತ್ತಿದೆ. ಉದ್ಯೋಗ ಪ್ರಕಟಣೆಯಲ್ಲಿನ ಮಾನದಂಡಗಳನ್ನು ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ನಿರ್ದೇಶಕರ ಆಯ್ಕೆ ಸಮಿತಿಯ ಮುಂದೆ ಸಂದರ್ಶನಕ್ಕೆ ಆಹ್ವಾನಿಸಲಾಗುತ್ತಿದೆ. ನಿರ್ದೇಶಕರ ಆಯ್ಕೆ ಸಮಿತಿಯು ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಕ್ಷಮತೆ ಮತ್ತು ಆಯಾ ಹುದ್ದೆಯ ಸೂಕ್ತತೆಯನ್ನು ಗಮನದಲ್ಲಿರಿಸಿ ಆಯ್ಕೆಗೆ ಪರಿಗಣಿಸಲಾಗುತ್ತಿದೆ. |

ಕಡತ ಸಂಖ್ಯೆ: ನಅಇ 132 ಪಿ.ಆರ್.ಜೆ 2022

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ

ಅನುಬಂಧ

| ಕ್ರ.ಸಂ | ಹುದ್ದೆ | ಸಂಚಿತ ವೇತನ |
|---|---|---|
| 1 | ಹೆಚ್ಚುವರಿ ಮುಖ್ಯ ಅಭಿಯಂತರರು | 174810 |
| 2 | ಸಲಹೆಗಾರರು | 214390 |
| 3 | ಭದ್ರತಾ ಅಧಿಕಾರಿ | 53610 |
| 4 | ಅಸಿಸ್ಟೆಂಟ್ ಕ್ಯೂರೇಟರ್ | 44710 |
| 5 | ಸಹಾಯಕ ಅಭಿಯಂತರರು | 68600 |
| 6 | ಸಹಾಯಕ ಪರಿಸರ ಅಧಿಕಾರಿ | 28090 |
| 7 | ಸ.ಕಾರ್ಯನಿರ್ವಾಹಕ ಅಭಿಯಂತರರು | 80600 |
| 8 | ಸಹಾಯಕ ಪ್ರಧಾನ ವ್ಯವಸ್ಥಾಪಕರು | 80490 |
| 9 | ಸಹಾಯಕ ವ್ಯವಸ್ಥಾಪಕರು | 74750 |
| 10 | ಭದ್ರತಾ ಮೇಲ್ವಿಚಾರಕ | 43060 |
| 11 | ಮುಖ್ಯ ಆರ್ಕಿಟೆಕ್ಟ್ | 159000 |
| 12 | ಮುಖ್ಯ ಅಭಿಯಂತರರು | 195670 |
| 13 | ಮುಖ್ಯ ಪ್ರಧಾನ ವ್ಯವಸ್ಥಾಪಕರು | 212000 |
| 14 | ಮುಖ್ಯ ಆರೋಗ್ಯ ಎಕ್ಸ್‌ಫರ್ಟ್ | 140000 |
| 15 | ಮುಖ್ಯ ಭದ್ರತಾ ಅಧಿಕಾರಿ | 95290 |
| 16 | ಕಂಪನಿ ಕಾರ್ಯದರ್ಶಿ | 241580 |
| 17 | ಸಲಹೆಗಾರರು ಕೈಗಾರಿಕಾ ಭಾಂದವ್ಯಗಳು | 100380 |
| 18 | ಕಾಂಟ್ರಾಕ್ಟ್ ಎಕ್ಸ್‌ಫರ್ಟ್ | 265130 |
| 19 | ಡಾಟಾ ಎಂಟ್ರಿ ಆಪರೇಟರ್ | 34840 |
| 20 | ಉಪ ಮುಖ್ಯ ಅಭಿಯಂತರರು | 184600 |
| 21 | ಉಪ ಮುಖ್ಯ ಭದ್ರತಾ ಮೇಲ್ವಿಚಾರಕ | 77280 |
| 22 | ಉಪ ಪ್ರಧಾನ ವ್ಯವಸ್ಥಾಪಕರು | 174150 |
| 23 | ಸಹಾಯಕ ವ್ಯವಸ್ಥಾಪಕರು | 70580 |
| 24 | ನಿರ್ದೇಶಕರು | 398820 |
| 25 | ಡ್ರಾಫ್ಟ್ ಮೆನ್ | 27800 |
| 26 | ಎಲೆಕ್ಟ್ರೀಷಿಯನ್ | 27880 |
| 27 | ಇಂಜನಿಯರ್ | 32190 |
| 28 | ಕಾರ್ಯನಿರ್ವಾಹಕ ಸಹಾಯಕರು | 75100 |
| 29 | ಕಾರ್ಯನಿರ್ವಾಹಕ ನಿರ್ದೇಶಕರು | 386540 |
| 30 | ಕಾರ್ಯನಿರ್ವಾಹಕ ಅಭಿಯಂತರರು | 95760 |
| 31 | ಎಕ್ಸ್‌ಪರ್ಟ್– ಡಿಪೋಟ್ ಡಿಸೈನ್ | 238210 |
| 32 | ಫೈರ್ಮನ್ | 31760 |
| 33 | ಪ್ರಥಮ ದರ್ಜೆ ಸಹಾಯಕ | 41550 |
| 34 | ಪ್ರಧಾನ ವ್ಯವಸ್ಥಾಪಕರು | 195000 |
| 35 | ಪದವೀಧರ ಅಭಿಯಂತರರು (ಸಿವಿಲ್) | 32180 |
| 36 | ಆರ್ಟಿಕಲ್ಚರ್ ಸಹಾಯಕ | 38350 |
| 37 | ಕಿರಿಯ ಅಭಿಯಂತರರು | 43450 |
| 38 | ಜ್ಯೂನಿಯರ್ ಟ್ರಾನ್ಸ್‌ಪೋರ್ಟ್ ಪ್ಲಾನರ್ | 75000 |
| 39 | ಕಾನೂನು ಸಹಾಯಕರು | 50710 |
| 40 | ಸಂಪರ್ಕ ಅಧಿಕಾರಿ | 32120 |
| 41 | ಲೈಸನಿಂಗ ಅಧಿಕಾರಿ | 40000 |

| | | |
|---|---|---|
| 42 | ಮೆಂಟೇನರ್ | 55800 |
| 43 | ವ್ಯವಸ್ಥಾಕರು | 95760 |
| 44 | ಆಪರೇಟಿಂಗ್ ಎಕ್ಸ್‌ಪರ್ಟ್ | 74250 |
| 45 | ಆಪರೇಷನ್ ಸಹಾಯಕ | 20710 |
| 46 | ಅಟೆಂಡರ್ | 25300 |
| 47 | ಆಪ್ತ ಸಹಾಯಕರು | 84390 |
| 48 | ಆಪ್ತ ಸಹಾಯಕ | 62010 |
| 49 | ಪ್ಲಂಬರ್ | 25300 |
| 50 | ಪಾಯಿಂಟ್ಸ್‌ಮನ್ | 20720 |
| 51 | ಪ್ರೋಗ್ರಾಮರ್ | 52770 |
| 52 | ಯೋಜನಾ ವ್ಯವಸ್ಥಾಪಕರು | 280140 |
| 53 | ಸೆಕ್ರೆಟೇರಿಯಲ್ ಅಧಿಕಾರಿ | 79990 |
| 54 | ಸೆಕ್ಷನ್ ಇಂಜಿನೀಯರು | 50710 |
| 55 | ಭದ್ರತಾ ಅಧಿಕಾರಿ | 47700 |
| 56 | ಹಿರಿಯ ಡಾಕ್ಯುಮೆಂಟ್ ಕಂಟ್ರೋಲರ್ | 35910 |
| 57 | ಹಿರಿಯ ಕಾರ್ಯಪಾಲಕ ಅಭಿಯಂತರರು | 110000 |
| 58 | ಹಿರಿಯ ವ್ಯವಸ್ಥಾಪಕರು | 75000 |
| 59 | ಹಿರಿಯ ಟ್ರಾನ್ಸ್‌ಪೋರ್ಟ್ ಪ್ಲಾನರ್ | 80000 |
| 60 | ಶಿರಸ್ತೆದಾರರು' | 32800 |
| 61 | ನಿಲ್ದಾಣ ನಿಯಂತ್ರಕ/ರೈಲು ಚಾಲಕ | 78880 |
| 62 | ಸ್ಟೇಷನ್ ಮ್ಯಾನೇಜರ್ | 49680 |
| 63 | ಸೂಪರ್‌ವೈಸಿಂಗ್ ಅಧಿಕಾರಿ | 95610 |
| 64 | ಮೇಲ್ವಿಚಾರಕ | 47400 |
| 65 | ಸರ್ವೇಯರ್ | 28320 |
| 66 | ಸಿಸ್ಟಂ ಅನಾಲಿಸಿಸ್ಟ್ | 85140 |
| 67 | ತಹಸೀಲ್ದಾರ್ | 41770 |
| 68 | ಟ್ಯಾಕ್ಸ್ ಅಸೋಸಿಯೇಟ್ | 28230 |
| 69 | ತಾಂತ್ರಿಕ ಸಹಾಯಕ | 41400 |
| 70 | ಟ್ರಾಕ್ಮ್ಯಾನ್ | 23390 |
| 71 | ಉಪ ಪ್ರಾಂಶುಪಾಲರು | 95290 |
| 72 | ವೆಲ್ಡರ್-ಕಂ-ಬ್ಲಾಕ್‌ಸ್ಮಿತ್ | 45310 |